**ದಿನಾಂಕಃ 22-09-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ರಿಂದ 13 ನೇ ಪ್ರತಿವಾದಿಗಳ ಪರ ಶ್ರೀ ಬಿ.ಜಿ.ಆರ್. ವಕೀಲರಿಂದಃ**

ಮೂಲ ಪುರುಷ ಭರಮಪ್ಪ ಯಾವಾಗ ಮೃತಪಟ್ಟಿದ್ದಾರೆ ಎಂದರೆ 1934 ರಲ್ಲಿ ತೀರಿಕೊಂಡಿದ್ದಾರೆ. ಭರಮಪ್ಪ 1934 ನೇ ಇಸವಿಯಲ್ಲಿ ಮೃತಪಟ್ಟ ಬಗ್ಗೆ ದಾಖಲೆಗಳನ್ನು ನೋಡಿದ್ದೀರಾ ಎಂದರೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ಭರಮಪ್ಪರವರಿಗೆ ಸಂಬಂದಿಸಿದ ಅಲಬ್ಯ ಪ್ರಮಾಣ ಪತ್ರವನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸದರಿ ಅಲಬ್ಯ ಪ್ರಮಾಣ ಪತ್ರದಲ್ಲಿ ಭರಮಪ್ಪನ ಮರಣ ದಿನಾಂಕ ದಿನಾಂಕ 01-04-1910 ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

2. ನಿ ಪಿ -24 ಅಲಬ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಭರಮಪ್ಪನ ಮರಣ ದಿನಾಂಕ ತಪ್ಪಿದೆಯಾ ಎಂದರೆ ತಪ್ಪಾಗಿದೆ ಎಂದು ಹೇಳುತ್ತಾರೆ. ನಿ ಪಿ -24 ನ್ನು ಪಡೆದುಕೊಳ್ಳಲು ಗುರುಬಸಯ್ಯ ಸಾಲಿ ಮಠ ಎಂಬುವವರು ಅರ್ಜಿ ಕೊಟ್ಟಿದ್ದಾರೆ ಎಂದರೆ ಸರಿ. ಅವರು ನಮಗೆ ಯಾವುದೇ ರೀತಿಯ ಸಂಬಂದ ಇಲ್ಲ ಪರಿಚಯವಿದ್ದಾರೆ. ಅವರ ಮಾಹಿತಿಯ ಪ್ರಕಾರ ನಾನು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಭರಮಪ್ಪನ ಮರಣ ದಿನಾಂಕ 1934 ನೇ ಇಸವಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ -24 ರಲ್ಲಿ ಬರೆದಿರುವ ಮರಣ ದಿನಾಂಕ 01.04.1910 ಭರಮಪ್ನ ಮರಣ ದಿನಾಂಕ ನಿಜವಲ್ಲ ಎಂದರೆ ಸರಿ.

3. ನಿ ಪಿ -25 ಕಾಳಮ್ಮನ ಮರಣ ದಿನಾಂಕ 01-05-1905 ಎಂದು ಬರೆಯಲಾಗಿದೆ ಎಂದರೆ ಅವಳ ಮರಣ ದಿನಾಂಕ 1944 ಎಂದು ಹೇಳುತ್ತಾರೆ. ಕಾಳಮ್ಮ 1944 ರಲ್ಲಿ ಮೃತಪಟ್ಟಿದ್ದಾರೆ ಎಂದು ತೋರಿಸಲು ನನ್ನ ಹೇಳಿಕೆಯನ್ನು ಹೊರತುಪಡಿಸಿ ಬೇರೆ ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಮೂಲ ಪುರುಷ ಭರಮಪ್ಪನಿಗೆ 3 ಜನ ಮಕ್ಕಳು ಎಂದು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಅದೇ ರೀತಿ ಕಾಳಾಚಾರಿ ಹೆಂಡತಿ ಕಾಳಮ್ಮ ಎಂದು ತೋರಿಸಲು ಎನಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ.

4. ಕಾಳಾಚಾರಿ ಮತ್ತು ಕಾಳಮ್ಮರವರ ಮಗಳು ತುಂಗಮ್ಮ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಅದೇ ರೀತಿ ತುಂಗಮ್ಮನ ಗಂಡ

ನಾಗೇಂದ್ರಪ್ಪ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನಿ ಪಿ -15 ದಾಖಲೆಯಲ್ಲಿ ಕಾಳಾಚಾರಿ ಹೆಸರು ಅದರಲ್ಲಿ ಇದೆಯಾ ಎಂದರೆ ಅದನ್ನು ನಾನು ಹಾಜರುಪಡಿಸಿಲ್ಲ. ಅದೇ ರೀತಿ ನಿ ಪಿ -16 ರಲ್ಲಿ ಕಾಳಾಚಾರಿ ಹೆಸರು ಇದೆಯಾ ಎಂದರೆ ಅದನ್ನು ನಾನು ಹಾಜರುಪಡಿಸಿಲ್ಲ ಎಂದು ಹೇಳುತ್ತಾರೆ. ನಾನು ಹಾಜರುಪಡಿಸಿರುವ ನಿ ಪಿ -17 ರಿಂದ 19 ದಾಖಲೆಗಳಲ್ಲಿ ಕಾಳಾಚಾರಿ ಹೆಸರುಗಳು ಇಲ್ಲ ಎಂದರೆ ಸರಿ. ನಾನು ಕಾಳಾಚಾರಿಯ ವಂಶಸ್ಥಳಲ್ಲದ ಕಾರಣ ನನಗೆ ದಾವಾ ಆಸ್ತಿಯಲ್ಲಿ ಹಿಸ್ಸೆ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ 4(ಎ) ದಿಂದ 4(ಎಫ್) ಹಾಗೂ 5 ನೇ ಪ್ರತಿವಾದಿಗಳ ಪರ ಶ್ರೀ ಎಸ್ ಎ ಕೆ ವಕೀಲರ ಕೋರಿಕೆ ಮೇರೆಗೆ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

(ಬಿ.ಸಿದ್ದರಾಜು)

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.